**ದಿನಾಂಕಃ 26-11-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಶ್ರೀ ಎನ್.ಎನ್.ಆರ್. ವಕೀಲರಿಂದ**

ನಾನು ಪದವೀದರನಾಗಿರುತ್ತೇನೆ. ಸಾಕ್ಷಿಗೆ ದಾವೆಯಲ್ಲಿ ಸಲ್ಲಿಸಿರುವ ವಕಾಲತ್‌ಗಳನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ವಕಾಲತ್ ಗಳನ್ನು ನಿಪಿ15, 16 ಹಾಗೂ ಸಹಿಗಳನ್ನು ನಿಪಿ15ಎ, 16ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ನಿಪಿ16 ರಲ್ಲಿ ಸಹಿಯನ್ನು ಗೀಚಿ ಹಾಕಿರುತ್ತೇನೆಂದು ನುಡಿಯುತ್ತಾರೆ. ಆಂಜನೇಯಸ್ವಾಮಿ ದೇವಸ್ಥಾನದ ಟ್ರಸ್ಟ ನ ಅಧ್ಯಕ್ಷ ನಾನು ಎಂದು ಹೇಳಲು ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮೋಹನ್‌ರವರಿಂದ ನಾವು ಮಾಡಿಕೊಂಡಿರುವ ನೋಂದಣಿ ರಹಿತ ಕರಾರುಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆಂಜನೇಯಸ್ವಾಮಿ ದೇವಸ್ಥಾನದ ಟ್ರಸ್ಟ ನೋಂದಣಿ ಆಗಿರುತ್ತದೆ. ಸದರಿ ಟ್ರಸ್ಟ್ ನೋಂದಣಿ ಪಡಿಸಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಅಭ್ಯಂತರವಿರುವುದಿಲ್ಲ. ಕಿಲಾರ್ಲಹಳ್ಳಿಯಿಂದ ಚಿನ್ನಮ್ಮನಹಳ್ಳಿ ಗ್ರಾಮದ ವರೆಗೆ ಪಿ ಡಬ್ಲೂಡಿ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆ ಅಶ್ವತ್ಥಕಟ್ಟೆಯ ಪಶ್ಚಿಮ ದಿಕ್ಕಿನಲ್ಲಿ ಹಾದು ಹೋಗುತ್ತದೆಂದರೆ ಸರಿ. ಪಿಡೂಬ್ಲಡಿ ರಸ್ತೆಯ ಪಕ್ಕದಲ್ಲಿ ಸರಕಾರಿ ಕೆರೆ ಕಟ್ಟೆ ಇರುತ್ತದೆಂದರೆ ಸರಿ. ಕೆರೆ ಕಟ್ಟೆಯ ಮೇಲೆ ಈರಣ್ಣ ನವರು ಅಂಗಡಿ ಹಾಕಿರುತ್ತಾರೆಂದರೆ ಈರಣ್ಣನವರು ಕಟ್ಟೆಗೆ ಹೊಂದಿಕೊಂಡು ಅಂಗಡಿಯನ್ನು ಹಾಕಿರುತ್ತಾರೆ.

ಈರಣ್ಣ ನನ್ನ ಅಳಿಯ ಎಂದರೆ ಸರಿ. ಈರಣ್ಣನವರ ಅಂಗಡಿಯ ಪಕ್ಕದಲ್ಲಿ ವಡ್ಡರ ರಾಮಪ್ಪನವರ ಪೆಟ್ಟಿಗೆ ಅಂಗಡಿ ಇದೆ ಎಂದರೆ ಸರಿ. ವಡ್ಡರ ರಾಮಪ್ಪನವರ ಪೆಟ್ಟಿಗೆ ಪಕ್ಕದಲ್ಲಿ ಕೊತ್ತೂರು ನಾಗರಾಜಪ್ಪನವರ ಸೇವಿಂಗ್ ಷಾಪ್ ಅಂಗಡಿ ಇದೆ ಎಂದರೆ ಸರಿ. ಅದರ ಪಕ್ಕದಲ್ಲಿ ಸಿದ್ದಮ್ಮನ ಪೆಟ್ಟಿಗೆ ಅಂಗಡಿ ಇದೆ ಎಂದರೆ ಸರಿ. ಸಿದ್ದಮ್ಮ ನಮ್ಮ ಜನಾಂಗಕ್ಕೆ ಸೇರಿದ್ದಾರೆಂದರೆ ಸರಿ. ಅವರ ಅಂಗಡಿ ಬಾಗಿಲು ಉತ್ತರ ದಿಕ್ಕಿಗೆ ಇರುತ್ತದೆ. ಅಶ್ವತ್ಥಕಟ್ಟೆ ಹಾಗೂ ಸರಕಾರಿ ಕಟ್ಟೆ ಮದ್ಯದಲ್ಲಿ ಪಿಡಬ್ಲೂಡಿ ರಸ್ತೆ ಇದೆ ಎಂದರೆ ಸರಿ. ಅಶ್ವತ್ಥಕಟ್ಟೆಯಿಂದ ಪಿಡಬ್ಲೂಡಿ ರಸ್ತೆ ಮದ್ಯದಲ್ಲಿ ದಕ್ಷಿಣದಕಡೆಗೆ 15 ರಿಂದ 20 ಮೀಟರ್ ಅಂತರವಿರುತ್ತದೆ. ಉತ್ತರದ ಕಡೆಗೆ ಇನ್ನೂ ಹೆಚ್ಚು ಅಂತರವಿರುತ್ತದೆ. ಈರಣ್ಣನವರ ಅಂಗಡಿಯ ಮುಂದೆ ಜಾಗ ಕಡಿಮೆ ಇರುವ ಕಾರಣ ಪಿಡಬ್ಲೂಡಿಯ ಜಾಗ ಒತ್ತುವರಿ ಮಾಡಿ ಈರಣ್ಣ ಕಲ್ಲುಕಟ್ಟಡವನ್ನು ಕಟ್ಟಿರುತ್ತಾರೆಂದರೆ ಸರಿಯಲ್ಲ ರಸ್ತೆಗೆ ಹೊಂದಿಕೊಂಡು ಈರಣ್ಣನವರು ಕಟ್ಟಿರುತ್ತಾರೆ. ಈರಣ್ಣ ನನ್ನ ಸಂಬಂಧಿಕರಾಗಿದ್ದು ಅವರಿಗೆ ಒತ್ತುವರಿ ಮಾಡಲು ಸಹಾಯ ಮಾಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ರಾಮಪ್ಪ, ಈರಣ್ಣ ಒತ್ತುವರಿ ಮಾಡಿರುತ್ತಾರೆ. ವಾದಿ ಮನೆಯ ಉತ್ತರ ದಿಕ್ಕಿನಲ್ಲಿ ಅಂಗನವಾಡಿ ಇದೆ ಎಂದರೆ ಸಾಕ್ಷಿಯು ಅದು ವಾಯುವ್ಯ ದಿಕ್ಕಿಗೆ ಬರುತ್ತದೆಂದು ನುಡಿಯುತ್ತಾರೆ. ಅಂಗನವಾಡಿ ಪಕ್ಕದಲ್ಲಿ ಆಂಜನೇಯ ದೇವಸ್ಥಾನವಿದೆ ಎಂದರೆ ಸರಿ. ಸದರಿ ದೇವಸ್ಥಾನದ ಪಕ್ಕದಲ್ಲಿ ತಾಡಿ ವೀರನಾಗಮ್ಮ ದೇವಸ್ಥಾನವಿದೆ ಎಂದರೆ ಸರಿ. ಆಂಜನೇಯಸ್ವಾಮಿ ದೇವಸ್ಥಾನದಿಂದ ವಾದಿ ಮನೆಗೆ ಅಂದಾಜು 200 ಮೀಟರ್ ಆಗುತ್ತದೆ. ವಾದಿ ಮನೆಗೂ ನಮಗೂ ಯಾವುದೇ ಸಂಬಂಧ ವಿರುವುದಿಲ್ಲವೆಂದರೆ ಸರಿ. ವಾದಿ ಮನೆಯ ಯಾವುದೇ ದಿಕ್ಕಿನಲ್ಲಿ ನಮ್ಮ ಮನೆ ಇರುವುದಿಲ್ಲ, ನನ್ನ ಮನೆ ವಾದಿ ಮನೆಯಿಂದ ದೂರವಿರುತ್ತದೆ.

ನನ್ನ ವಾಸದ ಮನೆಯ ಖಾತೆ ನಂ. ಗೊತ್ತಿರುವುದಿಲ್ಲ. ನಾನು ವಾಸ ಮಾಡುತ್ತಿರುವ ಮನೆ ಸ .ನಂ. 109/1 ರಲ್ಲಿರುತ್ತದೆ. ಸದರಿ ಮನೆ ಹೊಲದಲ್ಲಿರುತ್ತದೆ. ನನ್ನ ಮತ್ತೊಂದು ಮನೆ ಊರಿನಲ್ಲಿ ಇರುತ್ತದೆ. ನಾನು ವಾಸ ಮಾಡುತ್ತಿರುವ ಮನೆ ಜಾಗ ಭೂಪರಿವರ್ತನೆ ಆಗಿರುವುದಿಲ್ಲ, ಆದರೆ ಪಂಚಾಯತಿಯಲ್ಲಿ ಖಾತೆ ಆಗಿರುತ್ತದೆ. ನಾನು ದವಡಬೆಟ್ಟ ಗ್ರಾಮದಲ್ಲಿ ವಾಸವಾಗಿರುವುದಿಲ್ಲವೆಂದರೆ ಸರಿಯಲ್ಲ. ನಾನು ದವಡಬೆಟ್ಟ ಗ್ರಾಮದಿಂದ 1 ಕಿ.ಮೀ ದೂರದಲ್ಲಿ ತಾಂಡ ಗೆ ಹೋಗುವ ರಸ್ತೆಯಲ್ಲಿ ಹೊಲದಲ್ಲಿ ಮನೆ ಕಟ್ಟಿಕೊಂಡು ವಾಸವಿರುತ್ತೇನೆಂದರೆ ಸಾಕ್ಷಿಯು ವ್ಯವಸಾಯದ ಕೆಲಸ ಇದ್ದಾಗ ಹೊಲದ ಮನೆಯಲ್ಲಿ ಇರುತ್ತೇನೆ. ಬೇರೆ ಸಮಯದಲ್ಲಿ ಊರಿನ ಮನೆಯಲ್ಲಿ ವಾಸವಿರುತ್ತೇನೆ ಎಂದು ನುಡಿಯುತ್ತಾರೆ. ಅಂಗನವಾಡಿ ದಕ್ಷಿಣಕ್ಕೆ ಸಣ್ಣಮ್ಮನ ಪೆಟ್ಟಿಗೆ ಅಂಗಡಿ ಇದೆ ಎಂದರೆ ಸರಿ. ಸಣ್ಣಮ್ಮನ ಪೆಟ್ಟಿಗೆ ಅಂಗಡಿ ಪಕ್ಕದಲ್ಲಿ ಸಮುದಾಯಭವನ ಇದೆ ಎಂದರೆ ಸರಿ. ಸದರಿ ಸಮುದಾಯಭವನ ದೇವಸ್ಥಾನಕ್ಕೆ ಹೊಂದಿಕೊಂಡು ಇರುತ್ತದೆ. ವಾದಿ ಮನೆ ಪಶ್ಚಿಮಕ್ಕೆ ಗ್ರಾಮಠಾಣ ಜಾಗದಲ್ಲಿ ಸರಕಾರದವರು ಸೀಮೆಂಟ್ ಕಾಂಕ್ರೀಟ್ ರಸ್ತೆ ಇದೆ ಎಂದರೆ ಸರಿಯಲ್ಲ. ವಾದಿ ಮನೆ ಪಶ್ಚಿಮಕ್ಕೆ ಕಾಂಕ್ರೀಟ್ ಹಾಕಿರುತ್ತಾರೆ. ಅದು ಗ್ರಾಮಠಾಣಾ ಜಾಗ ಆಗಿರುವುದಿಲ್ಲ ಅಲ್ಲಿ ಸುತ್ತಲೂ ಕಾಂಕ್ರೀಟ್ ಹಾಕಿರುತ್ತಾರೆ. ಸಣ್ಣಮ್ಮನ ಪೆಟ್ಟಿಗೆ ಅಂಗಡಿ ಹಾಗು ಸಮುದಾಯಭವನದ ಮುಂದೆ ಕಾಂಕ್ರೀಟ್ ಹಾಕಿರುತ್ತಾರೆಂದರೆ ಸರಿ. ವಾದಿ ಮನೆಯಿಂದ ಅಶ್ವತ್ಥಕಟ್ಟೆ ಗ 4 ರಿಂದ 5 ಮೀಟರ್ ಆಗುತ್ತದೆ. ಗುಂಡ್ಲಹಳ್ಳಿ ಸೀತಾರಾಮಪ್ಪನಿಗೆ ನನಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ. ವಾದಿ ಮನೆ ಸುತ್ತಲೂ ಕಲ್ಲು ಬಂಡೆ ನಿಲ್ಲಿಸಿ ಕಾಂಪೌಂಡ್ ಮಾಡಿರುತ್ತಾರೆಂದರೆ ಉತ್ತರಕ್ಕೆ, ದಕ್ಷಿಣಕ್ಕೆ, ಪಶ್ಚಿಮಕ್ಕೆ ಕಲ್ಲು ಬಂಡೆ ಕಾಂಪೌಂಡ್ ಇರುತ್ತದೆ ಪೂರ್ವಕ್ಕೆ ಬೇರೆಯವರ ಮನೆ ಇರುತ್ತದೆ.

ವಾದಿ ಮನೆ ಕಟ್ಟಿ ಸುಮಾರು 65 ರಿಂದ 70 ವರುಷಗಳಾಗಿರುತ್ತದೆಂದರೆ ಸರಿ. ವಾದಿ ಮನೆ ಉತ್ತರ ದಕ್ಷಿಣ 60 ಅಡಿ ಪೂರ್ವ ಪಶ್ಚಿಮ 40 ಅಡಿ ಇದೆ ಎಂದರೆ ಸರಿಯಲ್ಲ. ವಾದಿ ಮನೆ ಎಷ್ಟು ವಿಸ್ತೀರ್ಣದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಅಶ್ವತ್ಥಕಟ್ಟೆಯ ದಕ್ಷಿಣಕ್ಕೆ ಒಂದು ಸೇದೋ ಬಾವಿ ಇತ್ತು ಎಂದರೆ ಹಿಂದೆ ಇತ್ತು ಈಗ ಅದನ್ನು ಮುಚ್ಚಿ ಹಾಕಿರುತ್ತಾರೆ. ಅಶ್ವತ್ಥಕಟ್ಟೆ ಸುತ್ತಲೂ ಕಾಂಕ್ರೀಟ್ ಇದೆ ಎಂದರೆ ಸರಿ. ಕಾಂಕ್ರೀಟ್ ಹಾಕಿ 10 ವರುಷಗಳಾಗಿದೆ ಎಂದರೆ ಸರಿ. ವೀರಕ್ಯಾತಪ್ಪ ಎನ್ನುವರು ಸೇದೋಬಾವಿಯನ್ನು ಮುಚ್ಚಿರುತ್ತಾರೆಂದರೆ ಸರಿ. ಅದು ಅವರ ಸ. ನಂ. ಅಗಿದ್ದು ಅದನ್ನು ಮುಚ್ಚಿರುತ್ತಾರೆ. ವೀರಕ್ಯಾತಪ್ಪ ನವರ ಸ. ನಂ. 58 ರಲ್ಲಿ ಬರುತ್ತದೆ. ಹಿಸ್ಸೆ ಸರಿಯಾಗಿ ಗೊತ್ತಿಲ್ಲ. ವಾದಿ ಸ್ವತ್ತಿನ ಪೂರ್ವಕ್ಕೆಃ ಪಾಲಮ್ಮ ಮತ್ತು ಕಮ್ಮರ ತಿಮ್ಮಯ್ಯನವರ ಮನೆ ಇರುತ್ತದೆಂದರೆ ಸರಿ ಯಲ್ಲ. ಪಾಲಮ್ಮನಿಂದ ಮೂರ್ಕಣ್ಣಪ್ಪ ಖರೀದಿ ಮಾಡಿರುತ್ತಾರೆ. ಪಶ್ಚಿಮಃ ಗ್ರಾಮಠಾಣ ಎಂದರೆ ಸರಿಯಲ್ಲ. ಉತ್ತರಕ್ಕೆಃ ಬಂಡಿದಾರಿ, ದಕ್ಷಿಣಕ್ಕೆಃ ಈರದಿಮ್ಮಯ್ಯನ ಮನೆ ಬರುತ್ತದೆಂದರೆ ಸರಿ. ಗುಜ್ಜನಾಡು ಗ್ರಾಮ ಪಂಚಾಯತಿಯಿಂದ ಮನೆ ಕಟ್ಟಲು ಪರವಾನಗಿಯನ್ನು ವಾದಿಗೆ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದ ಚೆಕ್ಕುಬಂದಿ ಪ್ರಕಾರ ವಾದಿ ಮನೆ ಯಾವುದೇ ದಿಕ್ಕಿನಲ್ಲಿ ನನ್ನ ಮನೆ ಇರುವುದಿಲ್ಲವೆಂದರೆ ಸರಿ. ವಾದಿ ಮನೆಯ ಪಶ್ಚಿಮ ದಿಕ್ಕಿಗೆ ಗ್ರಾಮಠಾಣ ಇರುವ ಕಾರಣ ಕಾಂಕ್ರೀಟ್ ಹಾಕಿರುತ್ತಾರೆಂದರೆ ಸರಿಯಲ್ಲ. ದೇವಸ್ಥಾನದ ಧ್ವಜಸ್ಥಂಭ ಬರುವ ಕಾರಣ ಅಲ್ಲಿ ಕಾಂಕ್ರೀಟ್ ಹಾಕಿರುತ್ತಾರೆ. ಸ. ನಂ. 58/1 ರಲ್ಲಿ ಒಟ್ಟು 3 ಎಕರೆ 13 ಗುಂಟೆ ವಿಸ್ತೀರ್ಣ ಇರುತ್ತದೆಂದರೆ ನನಗೆ ಗೊತ್ತಿಲ್ಲ. ಅದರ ಪೈಕಿ 1 ಎಕರೆ 30 ಗುಂಟೆ ದೊಡ್ಡಯ್ಯನಿಗೆ ಕ್ರಯ ಆಗಿದೆ ಎಂದರೆ ಸಾಕ್ಷಿಯು ಕ್ರಯ ಆಗಿರುವ ವಿಚಾರ ಗೊತ್ತು ಆದರೆ ಎಷ್ಟು ಎಕರೆಗೆ ಆಗಿದೆ ಎಂದು ಗೊತ್ತಿಲ್ಲ.

ಸ. ನಂ. 58/1 ಈಗ ಪುನಃ ಪೋಡಾಗಿ ಸ. ನಂ. 58/1 ಎ ಮತ್ತು ಬಿ ಆಗಿರುತ್ತದೆಂದರೆ ಸರಿ. ಸ. ನಂ. 58/1 ರಲ್ಲಿ 10 ಎಕರೆ ಪೈಕಿ 10 ಗುಂಟೆಯನ್ನು ಹನುಮಂತಯ್ಯ, ಕಮ್ಮಾರ ತಿಮ್ಮಯ್ಯ, ರಂಗಣ್ಣ ಇವರುಗಳಿಗೆ ನಿವೇಶನ ಕೊಟ್ಟಿರುತ್ತಾರೆ ಎಂದರೆ ಸರಿ. ಎಷ್ಟೆಷ್ಟು ವಿಸ್ತೀರ್ಣವನ್ನು ಕೊಟ್ಟಿರುತ್ತಾರೆಂದು ಗೊತ್ತಿಲ್ಲ. ಸ. ನಂ. 58/1 ರಲ್ಲಿ ಸೋಮಸುಂದರರಾವ್ ರವರು ಕೆ.ಆರ್. ಎಂ. ಪ್ರಕಾಶ ರವರಿಂದ 4 ಗುಂಟೆ ಕ್ರಯಕ್ಕೆ ಪಡೆದಿರುತ್ತಾರೆಂದರೆ ಗೊತ್ತಿಲ್ಲ. ಸದರಿ ಜಾಗದ ಪೂರ್ವಕ್ಕೆಃ ದೊಡ್ಡಯ್ಯನ ಜಮೀನು, ಪಶ್ಚಿಮಕ್ಕೆಃ ಸರಕಾರಿ ಕೆರೆ, ಉತ್ತರಕ್ಕೆಃ ಗ್ರಾಮಠಾಣ, ದಕ್ಷಿಣಕ್ಕೆಃ ಇದೇ ನಂ. ದೊಡ್ಡಯ್ಯನ ಜಮೀನು ಎಂದರೆ ಗೊತ್ತಿಲ್ಲ. ಸ. ನಂ. 58/1 ಮೊದಲು ಸೋಮಸುಂದರರಾವ್‌ಗೆ ಸೇರಿತ್ತು ಎಂದರೆ ಸರಿ. ಅವರು ಯಾರಿಂದ ಯಾವಾಗ ಕ್ರಯಕ್ಕೆ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. ವಾದಿ ಪಶ್ಚಿಮಕ್ಕೆಃ ಸೋಮಸುಂದರರಾವ್ ಆಗಲೀ ಅವರ ವಾರಸುದಾರರಾಗಲೀ ಇರುವುದಿಲ್ಲವೆಂದರೆ ಸರಿಯಲ್ಲ. ಅಶ್ವತ್ಥಕಟ್ಟೆಯನ್ನು ಅವರ ಕುಟುಂಬದವರೇ ಕಟ್ಟಿಸಿರುತ್ತಾರೆ. ವಾದಿ ಮನೆಗೆ ಉತರಕ್ಕೆ, ಪಶ್ಚಿಮಕ್ಕೆ, ದಕ್ಷಿಣಕ್ಕೆಃ ಬಾಗಿಲು ಇರುತ್ತದೆಂದರೆ ಸರಿಯಲ್ಲ. ಅವರ ಮನೆಯ ಉತ್ತರಕ್ಕೆ ಹಾಗೂ ದಕ್ಷಿಣಕ್ಕೆ ಬಾಗಿಲು ಇರುತ್ತದೆ. ವಾದಿಯ ಕಾಂಪೌಂಡ್ ಒಳಗೆ ಯಾವುದೇ ದಿಕ್ಕಿನಲ್ಲಿ ಬಾಗಿಲು ಇಟ್ಟರೆ ನನಗೆ ತೊಂದರೆ ಆಗುವುದಿಲ್ಲವೆಂದರೆ ಸರಿಯಲ್ಲ. ವಾದಿ ಪಶ್ಚಿಮ ದಿಕ್ಕಿ ನಲ್ಲಿ ಬಾಗಿಲು ಇಟ್ಟರೆ ದೇವಸ್ಥಾನಕ್ಕೆ ತೊಂದರೆ ಆಗುತ್ತದೆ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಸ್ವಾಧೀನ ಇರುವುದಿಲ್ಲವೆಂದರೆ ಸರಿ. ವಾದಿ ತಾತ ಹನುಮಂತಪ್ಪ ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದಾಗ ನಾನು ಹುಟ್ಟಿರುವುದಿಲ್ಲ. 1956 ರ ಕ್ರಯಪತ್ರದಲ್ಲಿ ದಾವಾ ಸ್ವತ್ತಿನ ಅಳತೆಯನ್ನು ಗಜದಲ್ಲಿ ಬರೆದಿರುತ್ತಾರೆಂದರೆ ಸರಿ.

ಅಳತೆಯನ್ನು ಕಣ್ ತಪ್ಪಿನಿಂದ ಬರೆದಿರುತ್ತಾರೆಂದರೆ ಸರಿಯಲ್ಲ. ಈ ರೀತಿ ಕಣ್ ತಪ್ಪಿನಿಂದ ಅಳತೆ ತಪ್ಪಾಗಿ ನಮೂದು ಆಗಿರುವ ಕಾರಣ ಸೀತಾರಾಮಪ್ಪ ಪೂರ್ವ ಪಶ್ಚಿಮ 40 ಅಡಿ, ಉತ್ತರ ದಕ್ಷಿಣ 40 ಅಡಿ ಖಾತೆ ಮಾಡಿಸಿಕೊಳ್ಳಲು ವಾದಿಯ ತಾತನಿಗೆ ಒಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಮಂಡಲ್ ಪಂಚಾಯತಿ ಇದ್ದಾಗ ಸಮಯದಿಂದಲೂ ಸಹ ವಾದಿ ಸ್ವತ್ತು ಪೂ.ಪ 40 ಅಡಿ ಉ.ದ 60 ಅಡಿ ಎಂದು ವಾದಿಯ ಖಾತೆಯಲ್ಲಿರುತ್ತದೆಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ಎಲ್ಲಾ ಗ್ರಾಮಸ್ಥರು ಸೇರಿ ವಾದಿಯ ಸ್ವತ್ತುನ್ನು ಅಳತೆ ಮಾಡಿದಾಗ ಪೂ.ಪ 40 ಅಡಿ ಇರುತ್ತದೆಂದು ಗೊತ್ತಾಗಿರುತ್ತದೆ. ನಾನು ವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಇರುವ ದಾರಿ ಪಕ್ಕದಲ್ಲಿ ನಾಗಭೂಷಣಶೆಟ್ಟಿ ಮನೆಯಿಂದ ವಡ್ಡರ ವೆಂಕಟಪ್ಪ ಮನೆವರೆಗೂ ಬಾಕ್ಸ ಚರಂಡಿ ಇದೆ ಎಂದರೆ ಸರಿಯಲ್ಲ. ಚರಂಡಿಯನ್ನು ಈಗ ಮುಚ್ಚಿ ಹಾಕಿರುತ್ತಾರೆಂದರೆ ಸಾಕ್ಷಿಯು ಚರಂಡಿ ಎಂದು ಇರುವುದಿಲ್ಲವೆಂದು ನುಡಿಯುತ್ತಾರೆ.

ದಿನಾಂಕಃ 05/05/2014 ರಲ್ಲಿ ಸ. ನಂ. 58/1 ಬಾಬ್ತು ದೇವಸ್ಥಾನಕ್ಕೆ ಸಂಬಂಧಿಸಿದಂತೆ ಒಂದು ಕರಾರುಪತ್ರವನ್ನು ಮಾಡಿಕೊಂಡಿರುತ್ತೇವೆ. ಆ ಸಮಯದಲ್ಲಿ ನಾನು ಪಹಣಿಯನ್ನು ಪರಿಶೀಲಿರುತ್ತೇನೆ. ಸ. ನಂ. 58/1 ರ ಸರ್ವೆ ನಕ್ಷೆಯನ್ನು ನೋಡಿರುವುದಿಲ್ಲ. ಸದರಿ ಕರಾರುತಪ್ರವನ್ನು ಮಾಡಿಸುವಾಗ ದೇವಸ್ಥಾನದ ಟ್ರಸ್ಟ್ ಇರಲಿಲ್ಲ ದೇವರ ಹೆಸರಿಗೆ ಕರಾರುಪತ್ರವನ್ನು ಮಾಡಿಸಿರುತ್ತೇವೆ.

ದಾವಾ ಆಸ್ತಿಯ ಯಾವುದೇ ದಿಕ್ಕಿನಲ್ಲಿ ಯಾವುದೇ ಜಮೀನು ಇರುವುದಿಲ್ಲವೆಂದರೆ ಸರಿಯಲ್ಲ. ಸ. ನಂ. 58/1 ಪಕ್ಕದಲ್ಲಿ ಸ. ನಂ. 58/1 ಎ ಮತ್ತು ಬಿ ಬರುತ್ತದೆಂದರೆ ನನಗೆ ಗೊತ್ತಿಲ್ಲ. ಸ. ನಂ. 58/1 ಬಿ ಜಮೀನು ದಾವಾ ಆಸ್ತಿಯ ದಕ್ಷಿಣಕ್ಕೆ ಸುಮಾರು 1000 ಮೀಟರ್ ದೂರದಲ್ಲಿದೆ ಎಂದರೆ ಸರಿಯಲ್ಲ. ಪಕ್ಕದಲ್ಲಿಯೇ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪಶ್ಚಿಮಕ್ಕೆ ಜಮೀನು ಇದೆಯೆ ೀ ಅಥವಾ ಗ್ರಾಮಠಾಣ ಇದೆಯೋ ಎಂಬ ಬಗ್ಗೆ ಮಾಹಿತಿ ಪಡೆಯಲು ನ್ಯಾಯಾಲಯದಿಂದ ಕಮೀಷನರ್ ನೇಮಕ ಮಾಡಲು ನನಗೆ ಅಬ್ಯಂತರವಿರುವುದಿಲ್ಲ.

ಟ್ರಸ್ಟ್ ನೋಂದಣಿಯಾದ ದಿನಾಂಕ ನೆನಪಿಲ್ಲ. ಹಿಂದಿನ ವರುಷ ದೇವಸ್ಥಾನದ ಟ್ರಸ್ಟ್ ಮಾಡಿರುತ್ತೇವೆ. ಅಶ್ವತ್ಥಕಟ್ಟೆ, ರಸ್ತೆ, ಸಮುದಾಯಭವನ ಸ. ನಂ. 58/1 ಎ ರಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಪೆಟ್ಟಿಗೆ ಅಂಗಡಿಗಳು ಸ. ನಂ. 58/1 ಎ ರಲ್ಲಿರುತ್ತದೆ. ಅಶ್ವತ್ಥಕಟ್ಟೆ ಸುತ್ತಲೂ ಹಾಕಿರುವ ಕಾಂಕ್ರಿಟ್ ರಸ್ತೆ, ದೇವಸ್ಥಾನದ ಮುಂದೆ ಇರುವ ಜಾಗ ಸ. ನಂ. 58/1 ಎ ರಲ್ಲಿ ಬರುತ್ತದೆ. ಸ. ನಂ. 58/1 ಎ ರಲ್ಲಿ ದೇವಸ್ಥಾನದ ಟ್ರಸ್ಟ್ ಗೆ ದಾನಪತ್ರ ಆಗಿರುತ್ತದೆ. ಸದರಿ ದಾನಪತ್ರದಲ್ಲಿ ನಮೂದು ಮಾಡಿರುವ ವಿಸ್ತೀರ್ಣ ನನಗೆ ಗೊತ್ತಿಲ್ಲ. ಅಶ್ವತ್ಥಕಟ್ಟೆ ಸುತ್ತಲೂ ಹಾಕಿರುವ ಕಾಂಕ್ರಿಟ್ ರಸ್ತೆ, ದೇವಸ್ಥಾನದ ಮುಂದೆ ಇರುವ ಕಾಂಕ್ರೀಟ್ ಜಾಗ ಇರುವ ವಿಸ್ತೀರ್ಣ ನನಗೆ ಗೊತ್ತಿಲ್ಲ.

ಈ ದಾವೆ ವಿಚಾರಣೆಗೆ ಬಾಕಿ ಇರುವ ಸಮಯದಲ್ಲಿ ವಾದಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ದಾನಪತ್ರ, ಕರಾರುಪತ್ರ, ಟ್ರಸ್ಟ್ ನ ನೋಂದಣಿ ಎಲ್ಲವನ್ನು ಸೃಷ್ಟಿ

ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ದಾನಪತ್ರದಲ್ಲಿ, ಅಶ್ವತ್ಥಕಟ್ಟೆ, ಸಮುದಾಯಭವನ, ಪೆಟ್ಟಿಗೆ ಅಂಗಡಿ , ಸುತ್ತಲೂ ಕಾಂಕ್ರೀಟ್ ಎಲ್ಲವು ಇದ್ದರೂ ಕೂಡ ದಾನಪತ್ರದಲ್ಲಿ ಖುಷ್ಕಿ ಜಮೀನು ಎಂದು ನಮೂದು ಮಾಡಿರುತ್ತೇನೆಂದರೆ ಪಹಣಿಯಲ್ಲಿ ಖುಷ್ಕಿ ಜಮಿನು ಎಂದು ಇರುತ್ತದೆ ಆದ್ದರಿಂದ ದಾನಪತ್ರದಲ್ಲಿಯೂ ಕೂಡ ಖುಷ್ಕಿ ಜಮೀನು ಎಂದು ನೋಂದಣಿ ಮಾಡಿಸಿಕೊಂಡಿರುತ್ತೇವೆಂದು ನುಡಿಯುತ್ತಾರೆ. ವಾದಿಗೆ ಅವರ ಸ್ವತ್ತಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ನಾನು ಈ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸ. ನಂ. 58/1 ರಲ್ಲಿ ಪೆಟ್ಟಿಗೆ ಅಂಗಡಿಗಳು ಇದ್ದರೂ ಸಹ ಅವರು ನನ್ನ ಸಂಬಂಧಿಕರಾಗಿದ್ದರಿಂದ ಅವರಿಗೆ ತೊಂದರೆ ಕೊಡದೇ ವಾದಿಗೆ ತೊಂದರೆ ಕೊಡುತ್ತಿದ್ದೇನೆಂದರೆ ಸರಿಯಲ್ಲ. ಪೆಟ್ಟಿಗೆ ಅಂಗಡಿಯವರು ಒತ್ತವರಿ ಮಾಡಿದ ಕಾರಣ ವಾದಿ ಪಶ್ಚಿಮ ದಿಕ್ಕಿಗೆ ಗ್ರಾಮಠಾಣ ಜಾಗವಿಲ್ಲವೆಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಎ.ಸಿ.ಜೆ., ಪಾವಗಡ.**